# ಗೌರವಾನ್ವಿತ ಮತದಾರರ ಸ್ವಾಭಿಮಾನಿ ಆಂದೋಲನ–2015

## ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ

ದಿನಾಂಕ:
ಸ್ಥಳ:

ಈಗ ನಾವು ಜನರ ನೇರ ಭಾಗವಹಿಸುವಿಕೆಯ ಸರ್ಕಾರವಾದ ಗ್ರಾಮ ಪಂಚಾಯತ್ ಚುನಾವಣೆಯ ಹೊಸ್ತಿಲಲ್ಲಿದ್ದೇವೆ. ನಾಗರಿಕರಾದ ನಮಗೆ, ನಮ್ಮ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯತೆ ಎತ್ತಿಹಿಡಿಯುವ ಸಲುವಾಗಿ ಒಟ್ಟುಗೂಡಲು ಇದು ಸಕಾಲ. ಹೀಗಾಗಿ ಗೌರವಾನ್ವಿತ ಮತದಾರರ ಸ್ವಾಭಿಮಾನದ ಆತ್ಮ ವಿಮರ್ಶೆಗಾಗಿ ಹಾಗೂ ಜನರಲ್ಲಿ ಗೌರವಯುತ ಮತದಾನದ ಕುರಿತಾಗಿ ಜಾಗೃತಿ ಮೂಡಿಸಲು **ಗೌರವಾನ್ವಿತ ಮತದಾರರ ಸ್ವಾಭಿಮಾನಿ ಆಂದೋಲನ**ವನ್ನು ಹಮ್ಮಿಕೊಳ್ಳಲಾಗಿದೆ.

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ವಿವಿಧ ಸಂಘ–ಸಂಸ್ಥೆಗಳ ಸಹಭಾಗಿತ್ವದಲ್ಲಿ, ಹತ್ತಾರು ಮಹಿಳಾ ಮತ್ತು ಯುವಜನ ಗುಂಪುಗಳ ಸಕ್ರೀಯ ಭಾಗವಹಿಸುವಿಕೆಯಲ್ಲಿ 2010ರಿಂದ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತ್, ವಿಧಾನ ಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಗೌರವಾನ್ವಿತ ಮತದಾರರ ಸ್ವಾಭಿಮಾನಿ ಆಂದೋಲನವನ್ನು ನಡೆಸುತ್ತಾ ಬಂದಿದೆ. ಈ ಅಭಿಯಾನದಲ್ಲಿ ರಾಜ್ಯದಾದ್ಯಂತ 60,000ಕ್ಕೂ ಹೆಚ್ಚು ಜನರು ನೇರವಾಗಿ ಪಾಲ್ಗೊಂಡರಲ್ಲದೇ, ಕಳೆದ 2014ರಲ್ಲಿ ನಡೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬೇರೆ ರಾಜ್ಯಗಳಲ್ಲಿಯೂ ಸಹ ಇತರ ಸಂಘ–ಸಂಸ್ಥೆಗಳ ನೇತೃತ್ವದಲ್ಲಿ ಸುಮಾರು 60,000 ಜನರನ್ನು ತಲುಪಿದೆ.



ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ

ಇಂದಿನ ರಾಜಕೀಯ ಸಾಮಾಜಿಕ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಹಣದಿಂದ ಕೊಳ್ಳಬಹುದು, ಎಲ್ಲವೂ ಮಾರಾಟಕ್ಕಿದೆ, ಎಲ್ಲವೂ ಮಾರಾಟಗೊಳ್ಳಲಾಗಿಯೇ ಇದೆ ಎನ್ನುವಂತಹ ವಾತಾವರಣ ಸೃಷ್ಟಿಗೊಂಡಿದೆ. ಅದನ್ನು ಕೊಳ್ಳಲು ಏನನ್ನಾದರೂ ಮಾಡಿಯಾಗಲೀ, ಅನೈತಿಕತೆಯಿಂದಾಗಿ ಆದರೂ ಹಣಗಳಿಸು ಎನ್ನುವ ಕೆಟ್ಟ ಕೊಳಕು ಉತ್ಸಾಹ ಕಂಡುಬರುತ್ತಿದೆ.

ಈಗ ಬಂದಿರುವ ಗ್ರಾಮ ಪಂಚಾಯತ್ ಚುನಾವಣೆ ಈ ಎಲ್ಲಾ ಚಟುವಟಿಕೆಗಳ ರಂಗಸಜ್ಜಿಕೆಯಾಗುವ ಲಕ್ಷಣಗಳು ಕಾಣುತ್ತಿವೆ. ವಿಕೇಂದ್ರೀಕೃತ ಪ್ರಜಾಪ್ರಭುತ್ವದಲ್ಲಿ ಜನರಿಗೆ ನೇರವಾಗಿ ಭಾಗವಹಿಸುವ ಅವಕಾಶವಿರುವ ಹಾಗೂ ಅತ್ಯಂತ ಸಮೀಪದಲ್ಲಿರುವ ಸರ್ಕಾರವೆಂದರೆ ಗ್ರಾಮ ಸರ್ಕಾರ.

ಇಂತಹ ಸರ್ಕಾರದ ರಚನೆಯ ಅತಿ ದೊಡ್ಡ ಪವಿತ್ರ ಸಂಭ್ರಮದ ಜಾತ್ರೆಯಾಗಿರುವ ಈ ಚುನಾವಣೆ ಓಟು ಕೊಳ್ಳುವ ಮಾರುಕಟ್ಟೆ, ಜನರು ತಮ್ಮನ್ನು ತಾವು ಹರಾಜು ಹಾಕುವ ತಾಣ ಎಂಬಂತಹ ರಾಜಕೀಯ ಪಕ್ಷಗಳ ಅನಿಸಿಕೆ, ಅಭಿಪ್ರಾಯಗಳಿಗೆ ಸೆಡ್ಡು ಹೊಡೆದು ಉತ್ತರ ನೀಡಲು ಇದು ಸಕಾಲವಾಗಿದೆ. ಚುನಾವಣೆ ಒಂದು ಹೊಸ ಸರ್ಕಾರ ಆಯ್ಕೆ ಮಾಡುವ ಅಥವಾ ಅವರ ಬದಲಿಗೆ ಇವರು ಎಂದು ಆಯ್ಕೆ ಮಾಡುವ ನೆಲೆಯಲ್ಲಿ ಯೋಚಿಸದೇ, ನಾವೊಂದು ಸ್ವಾಭಿಮಾನೀ ವ್ಯಕ್ತಿಯಾಗಿ ನಾವೊಂದು ಹಳ್ಳಿ, ಗ್ರಾಮಗಳ ಜಾಗೃತ ಮತದಾರರಾಗಿ, ನಮ್ಮೆಲ್ಲ ದಾಸ್ಯ, ಸಮಸ್ಯೆ, ಕಷ್ಟಗಳನ್ನು ಒಟ್ಟೊಟ್ಟಾಗಿ ನೋಡುತ್ತಾ ಅದರ ಬಿಡುಗಡೆಯ ವ್ಯವಸ್ಥೆಯಾಗಿ ಈ ಚುನಾವಣೆಯನ್ನು ನೋಡಬೇಕಾಗಿದೆ.

ಮಹಾತ್ಮಾ ಗಾಂಧಿ ಕಂಡ ಕನಸಿನ ಗ್ರಾಮ ಸ್ವರಾಜ್ಯದ ಸ್ಥಾಪನೆಗೆ ಇರುವ ಏಕೈಕ ಮಾರ್ಗವೆಂದರೆ ಪಂಚಾಯತ್ ರಾಜ್‌ನ ತ್ರಿಸ್ತರಗಳ ಸಂಪೂರ್ಣ ವಿಕೇಂದ್ರೀಕರಣ ಮಾತ್ರ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸ್ವಯಮಾಡಳಿತದ ಸ್ವಾಯತ್ತ ಘಟಕಗಳಾಗಿರಲು ಯಾವುದೇ ಪಕ್ಷ ರಾಜಕೀಯ, ತಾರತಮ್ಯಗಳು ಅಲ್ಲಿ ಪ್ರವೇಶಿಸಲು ಆಸ್ಪದ ಕೊಡದೇ, ಅವರ ಸಾಂವಿಧಾನಿಕ ಹಕ್ಕನ್ನು ನಿರಾಕರಣೆ ಮಾಡುವ ಕುತಂತ್ರಕ್ಕೆ ಹಾಗೂ ಗ್ರಾಮ ಸ್ವರಾಜ್ಯದ ಸತ್ವವನ್ನು ಕುಲಗೆಡಿಸುವ ಪ್ರಯತ್ನಕ್ಕೆ ಈ ಚುನಾವಣೆಯ ಮೂಲಕ ಗೌರವಾನ್ವಿತ ಮತದಾರ ಉತ್ತರ ನೀಡಬೇಕಿದೆ.

# ಗೌರವಾನ್ವಿತ ಮತದಾರರ ಸ್ವಾಭಿಮಾನಿ ಆಂದೋಲನ-2015

## ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ

ದಿನಾಂಕ:
ಸ್ಥಳ:

"ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀರಣವನ್ನು ತರಲು ಪಂಚಾಯತ್ ರಾಜ್ ಕೇವಲ ಒಂದು ಸಾಧನವಲ್ಲ, ಇದು ನಮ್ಮ ಹಳ್ಳಿಗಳ, ಪಟ್ಟಣಗಳ ಮತ್ತು ನಗರಗಳ ಬಡವರಿಗೆ ತೊಂದರೆ ಕೊಡುವ ಅಧಿಕಾರಶಾಹಿ ದಬ್ಬಾಳಿಕೆಯನ್ನು, ತಂತ್ರಜ್ಞರ ದಬ್ಬಾಳಿಕೆಯನ್ನು, ಅಧಕ್ಷರನ್ನು, ಲಂಚಗುಳಿತನವನ್ನು, ದಲ್ಲಾಳಿತನವನ್ನು, ಸ್ವಜನಪಕ್ಷಪಾತವನ್ನು, ಭ್ರಷ್ಟಾಚಾರವನ್ನು ಮತ್ತು ಮಿಲಿಯಗಟ್ಟಲೆ ಇತರ ದುಷ್ಕೃತ್ಯಗಳನ್ನು ಕೊನೆಗೊಳಿಸಲು ಇರುವ ಸನ್ನದು ಕೂಡಾ ಆಗಿದೆ." ಎಂದು ಶ್ರೀ ರಮೇಶ ಕುಮಾರ್ ನೇತೃತ್ವದ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿಯ ವರದಿಯಲ್ಲಿ ಹೇಳಿರುವಂತೆ ನಮ್ಮ ಹಕ್ಕನ್ನು ಚಲಾಯಿಸಿ ಈ ದೇಶದ ಸ್ವಾಭಿಮಾನಿ ಮತದಾರರಾಗಿ ಅರ್ಥಪೂರ್ಣ ದಾರಿ ತೋರಿಸುವ ಛಾತಿ ನಮಗಿದೆ ಎಂದು ತೋರಿಸುವ ಸಂದರ್ಭ ಇದಾಗಿದೆ. ಆ ನಿಟ್ಟಿನಲ್ಲಿ ಗೌರವಾನ್ವಿತ ಮತದಾರರಾದ ನಾವು:

- **ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳ ವಿವಿಧ ತಾಲೂಕುಗಳ ಬೇರೆ ಬೇರೆ ಸ್ಥಳದಲ್ಲಿ ಎಲ್ಲರೂ ಒಟ್ಟಾಗಿ ಒಂದು ದಿನ ಉಪವಾಸ ಕುಳಿತುಕೊಳ್ಳುವ ಮೂಲಕ ಮತದಾನದ ಬಗ್ಗೆ ನಮ್ಮ ಆತ್ಮವಿಮರ್ಶೆಯನ್ನು ಪ್ರಾರಂಭಿಸೋಣ.**

- **ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ ಸ್ಟಿಕರ್ ಖರೀದಿಸಿ ತಮ್ಮ ಮನೆಗೆ, ವಾಹನಕ್ಕೆ ಅಂಟಿಸಿಕೊಳ್ಳುವ ಮೂಲಕ ನಾವು ಯಾವುದೇ ಆಸೆ-ಆಮಿಷಗಳಿಗೆ ಒಳಗಾಗಿ ಮತ ಚಲಾಯಿಸುವುದಿಲ್ಲ ಎನ್ನುವ ಸಂದೇಶವನ್ನು ಅಭ್ಯರ್ಥಿಗಳಿಗೆ, ರಾಜಕೀಯ ಪಕ್ಷಗಳಿಗೆ ತಲುಪಿಸೋಣ.**

- **ಚುನಾವಣಾ ಅಭ್ಯರ್ಥಿಗಳಿಂದ ಮತವನ್ನು ಖರೀದಿಸುವುದಿಲ್ಲ, ಜನಪರ ದುಡಿಮೆಯಿಂದ ಮತ ಗಳಿಸುತ್ತೇನೆ ಎನ್ನುವ ಘೋಷವಾಕ್ಯಕ್ಕೆ ಸಹಿ ಪಡೆಯೋಣ.**

- **ತಮ್ಮ ತಮ್ಮ ಊರು-ಕೇರಿ-ಪಟ್ಟಣ-ಬೀದಿಗಳ ಮುಖ್ಯ ಪ್ರದೇಶದಲ್ಲಿ ಪ್ರಾತಃಕಾಲದಿಂದ ಸಾಯಂಕಾಲದವರೆಗೆ ಉಪವಾಸ ಸತ್ಯಾಗ್ರಹ ನಡೆಸುವ ಮೂಲಕ ತಮ್ಮ ಆತ್ಮಬಲದ ಸಂದೇಶ ತಲುಪಿಸೋಣ.**

- **ಈ ಮೂಲಕ ಗೌರವಾನ್ವಿತ ಮತದಾರರಲ್ಲಿ ಮತದಾನದ ಪಾವಿತ್ರ್ಯತೆಯ ಕುರಿತು ಜಾಗೃತಿ ಮೂಡಿಸುವ ಪ್ರಯತ್ನದತ್ತ ಹೆಜ್ಜೆ ಇಡೋಣ.**

- **ಗ್ರಾಮ ಸಭೆಯ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ ಗ್ರಾಮ ಸ್ವರಾಜ್ಯದ ಕನಸಿನ ಕೂಸಾದ ಶ್ರೀ ರಮೇಶ್ ಕುಮಾರ್ ಅಧ್ಯಕ್ಷತೆಯ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯ ವರದಿ 'ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ'ದ ಶಿಫಾರಸ್ಸುಗಳ ಅನುಷ್ಠಾನಕ್ಕೆ ಒತ್ತಾಯಿಸಿ ಒಟ್ಟಾಗಿ ನಿರ್ಣಯ ಮಂಡಿಸೋಣ.**

ಈ ಆಂದೋಲನವನ್ನು ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ನಡೆಸುತ್ತಿದ್ದೇವೆ. ಈ ಅಭಿಯಾನದಲ್ಲಿ ನಮ್ಮೊಂದಿಗೆ ತಾವು ಸಕ್ರೀಯವಾಗಿ ಭಾಗವಹಿಸುವುದರೊಂದಿಗೆ ಮತದಾನದ ಪಾವಿತ್ರ್ಯತೆಯನ್ನು ಎತ್ತಿಹಿಡಿಯಬೇಕೆಂಬುದು ನಮ್ಮ ಆಶಯ.